KACM300007132022

Presented on : 05-08-2022
Registered on : 05-08-2022
Decided on : 25-01-2025
Duration : 2 years, 5 months, 20 days

## ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ ಃ ಕೊಪ್ಪ

**ಉಪಸ್ಥಿತರುಃ ಶ್ರೀಮತಿ. ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ,**
**ಬಿ.ಕಾಂ., ಎಲ್‌ಎಲ್. ಎಂ.,**

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ಕೊಪ್ಪ**

**ದಿನಾಂಕ 25 ನೇ ಜನವರಿ ಮಾಹೆ 2025.**

**ಸಿ.ಸಿ. ನಂಃ 593/2022**

ಫಿರ್ಯಾದಿ : ಸರ್ಕಾರದ ಪರವಾಗಿ ಕೊಪ್ಪ ಪೊಲೀಸ್ ಠಾಣೆ,

(ಸಹಾಯಕ ಸರ್ಕಾರಿ ಅಭಿಯೋಜಕರು)

**- ವಿರುದ್ಧ -**

| | | |
|---|---|---|
| ಆರೋಪಿತರು | 1 | ಕೆ.ಪಿ. ರಮೇಶ ಬಿನ್ ಲೇಟ್ ಪುಟ್ಟೇಗೌಡ, 66 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 2 | ಕೆ.ಪಿ. ಚನ್ನಪ್ಪ ಬಿನ್ ಲೇಟ್ ಪುಟ್ಟೇಗೌಡ, 72 ವರ್ಷ, ವ್ಯವಸಾಯ, ವಾಸ ಇಂದಿರಾನಗರ, ಕೊಪ್ಪ ಪಟ್ಟಣ ಮತ್ತು ತಾಲ್ಲೂಕು. |
| | 3 | ಶಿವಪ್ಪ ಬಿನ್ ಲೇಟ್ ಪುಟ್ಟೇಗೌಡ, 67 ವರ್ಷ, ವ್ಯವಸಾಯ, ವಾಸ ಕೂಸಗೊಳ್ಳಿ, ಗುಣವಂತೆ, ಕೊಪ್ಪ ತಾಲ್ಲೂಕು. |
| | 4 | ಶ್ರೀನಿವಾಸ ಬಿನ್ ಲೇಟ್ ಪುಟೇಗೌಡ, 69 ವರ್ಷ, ವಿಶ್ರಾಂತ PDO, ಹಾಲಿ ವ್ಯವಸಾಯ, ವಾಸ ತೀರ್ಥಹಳ್ಳಿ ರಸ್ತೆ, ಕೊಪ್ಪ ಕೋರ್ಟ್ |

| | | |
|---|---|---|
| | | ಹತ್ತಿರ, ಕೊಪ್ಪ ತಾಲ್ಲೂಕು.<br>(**ಮೃತಪಟ್ಟಿರುತ್ತಾರೆ**.) |
| | | (ಶ್ರೀ ಎಂ.ಹೆಚ್.ಎಸ್.ಕೆ., ವಕೀಲರು) |

| | | |
|---|---|---|
| 1 | ಪ್ರಕರಣದ ದಿನಾಂಕ | 11.03.2022 |
| 2 | ಪ್ರಕರಣದ ವರದಿಯ ದಿನಾಂಕ | 11.03.2022 |
| 3 | ಫಿರ್ಯಾದಿಯ ಹೆಸರು | ಶ್ರೀ ಸುಜನ್ ಕೆ. ಎನ್. |
| 4 | ಸಾಕ್ಷ್ಯ ದಾಖಲೆ ಪ್ರಾರಂಭವಾದ ದಿನಾಂಕ | 22.01.2025 |
| 5 | ಸಾಕ್ಷ್ಯ ದಾಖಲೆ ಮುಕ್ತಾಯವಾದ ದಿನಾಂಕ | 22.01.2025 |
| 6 | ದೂರು ನೀಡಿರುವ ಅಪರಾಧ | ಭಾ.ದಂ.ಸಂ. ಕಲಂ 504, 324 ಸಹವಾಚಕ ಕಲಂ 34. |
| 7 | ನ್ಯಾಯಾಧೀಶರ ಅಭಿಪ್ರಾಯ | ಭಾ.ದಂ.ಸಂ. ಕಲಂ 504, 324 ಸಹವಾಚಕ ಕಲಂ 34ರ ರೀತ್ಯಾ ಆರೋಪಿತರನ್ನು ದೋಷಮುಕ್ತಗೊಳಿಸಿ ನಿರ್ದೋಷಿಗಳೆಂದು ಆದೇಶಿಸಲಾಗಿದೆ. |
| 8 | ಫಿರ್ಯಾದಿಯ ಪರವಾಗಿ | ಸ.ಸ.ಅ. |
| 9 | ಆರೋಪಿತರ ಪರವಾಗಿ | ಶ್ರೀ ಎಂ.ಹೆಚ್.ಎಸ್.ಕೆ., ವಕೀಲರು |

## ತೀರ್ಪು

ಠಾಣಾಧಿಕಾರಿಗಳು, ಕೊಪ್ಪ ಪೊಲೀಸ್ ಠಾಣೆ, ಇವರು 1 ರಿಂದ 4ನೇ ಆರೋಪಿತರು ಭಾ.ದಂ.ಸಂ. ಕಲಂ 504, 324 ಸಹವಾಚಕ ಕಲಂ 34ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

Visit **ecourts.gov.in** for updates or download mobile app "**eCourts Services**" from Android or iOS

2. ಅಭಿಯೋಜನೆಯವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ.

ದಿನಾಂಕ 11-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಕೊಪ್ಪ ಠಾಣಾ ಸರಹದ್ದಿನ ಕೊಪ್ಪ ತಾಲ್ಲೂಕು ಗುಣವಂತೆ ಗ್ರಾಮ ಕೂಸುಗೊಳ್ಳಿಯ ಸರ್ವೆ ನಂ 74/5 ರಲ್ಲಿನ ರತ್ನಮ್ಮ ಕೋಂ ಲೇಟ್ ಮಾನಪ್ಪಗೌಡ ಜಮೀನಿನ ಜಿ.ಪಿ.ಎ. ಹೊಂದಿರುವ ಚಾಸಾ-1 ಸುಜನ್ ರವರ ಭತ್ತದ ಗದ್ದೆಯಲ್ಲಿ ಚಾಸಾ-2 ಶ್ರೀನಿವಾಸರವರೊಂದಿಗೆ ಮಾತನಾಡುವಾಗ 1ರಿಂದ 4ನೇ ಆರೋಪಿಗಳು ಒಟ್ಟಾಗಿ ಚಾಸಾ.1 ರವರಿಗೆ ಅವಾಚ್ಯವಾಗಿ ಬೋಳಿಮಗನೆ ಸೂಳೆಮಗನೆ ಎಂದು ಬೈದು, 1ನೇ ಆರೋಪಿತನು ದೊಣ್ಣೆಯಿಂದ, ಚಾಸಾ-1 ರವರ ಬಲಕೈಯಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟುಮಾಡಿದ್ದಾಗಿರುತ್ತದೆ. ಈ ಬಗ್ಗೆ ಚಾಸಾ-1 ರವರ ದೂರಿನ ಮೇರೆಗೆ ಚಾಸಾ.7 ರವರು ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡು ಆರೋಪಿತರ ವಿರುದ್ಧ ಮೇಲ್ಕಂಡ ಕಲಂ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ತನಿಖಾಧಿಕಾರಿಯು ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿದ ನಂತರ ಮೇಲ್ಕಂಡ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರಿಗೆ ಸಮನ್ಸ್ ಜಾರಿ ಮಾಡಲಾಗಿರುತ್ತದೆ. ಆರೋಪಿತರು ತಮ್ಮ ಪರ ವಕೀಲರ ಮೂಲಕ ಹಾಜರಾಗಿ ಜಾಮೀನು ಅರ್ಜಿಯನ್ನು ಸಲ್ಲಿಸಿದ ಮೇರೆಗೆ ಆರೋಪಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿರುತ್ತದೆ. ಅ.ಪ್ರ.ಸಂ. ಕಲಂ 207ರ ಅಡಿಯಲ್ಲಿ ದೋಷಾರೋಪಣಾ ಪತ್ರದ ನಕಲನ್ನು ಆರೋಪಿತರಿಗೆ ಒದಗಿಸಲಾಯಿತು. ನಂತರ ಮೇಲ್ಕಂಡ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ

Visit **ecourts.gov.in** for updates or download mobile app "**eCourts Services**" from Android or iOS

ಹೇಳಲಾಯಿತು. ಆರೋಪಿತರು ದೋಷಾರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

4. ಈ ಪ್ರಕರಣದಲ್ಲಿ ಪಿರ್ಯಾದಿದಾರರಾದ ಚಾಸಾ.1 ರವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆಗಾಗಿ ಸಮನ್ಸ್ ಜಾರಿಗೊಳಿಸಿದ್ದು, ಸದರಿಯವರು ದಿನಾಂಕ 09.12.2024 ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು, ತದನಂತರದಲ್ಲಿ ಚಾಸಾ.1 ರವರು ಇಲ್ಲಿಯವರೆಗೂ ಸಾಕ್ಷಿ ವಿಚಾರಣೆಗಾಗಿ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ. 4 ನೇ ಆರೋಪಿ ದಿನಾಂಕ 08.01.2025 ರಂದು ಮೃತಪಟ್ಟಿದ್ದರಿಂದ ಅವರ ವಿರುದ್ದ ಈ ಪ್ರಕರಣವನ್ನು ಕೈಬಿಡಲಾಯಿತು. ಅಭಿಯೋಜನೆಯವರು ತಮ್ಮ ಪರವಾಗಿ ಒಟ್ಟು 7 ಜನ ಸಾಕ್ಷಿದಾರರನ್ನು ದೋಷಾರೋಪಣಾ ಪತ್ರದಲ್ಲಿ ಉಲ್ಲೇಖಿಸಿ, ಅವರಲ್ಲಿ ಒಬ್ಬರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿಕೊಂಡು ನಿಪಿ.1 ರಿಂದ 10 ದಾಖಲೆಗಳನ್ನು ಹಾಗೂ ಮುದ್ದೆ ಮಾಲು.1 ನ್ನು ಗುರ್ತಿಸಿಕೊಂಡಿರುತ್ತಾರೆ. ನಂತರ ಅ.ಪ್ರ.ಸಂ. ಕಲಂ 313 ರ ಅಡಿಯಲ್ಲಿ 1 ರಿಂದ 3 ನೇ ಆರೋಪಿತರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ತಮ್ಮ ವಿರುದ್ದದ ಅಭಿಯೋಜನೆಯ ಸಾಕ್ಷಿದಾರರ ಸಾಕ್ಷ್ಯವನ್ನು ಸಂಪೂರ್ಣವಾಗಿ ಸುಳ್ಳು ಎಂದು ಅಲ್ಲಗಳೆದಿದ್ದು ತಮ್ಮ ಪರವಾಗಿ ಯಾವುದೇ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

5. ವಾದವನ್ನು ಕೇಳಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ ಈ ಕೆಳಕಂಡ ಅಂಶಗಳು ನನ್ನ ತೀರ್ಮಾನಕ್ಕೆ ಉದ್ಭವಿಸುತ್ತವೆ.

1) ದಿನಾಂಕ 11.03.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಕೊಪ್ಪ ಠಾಣಾ ವ್ಯಾಪ್ತಿಯ ಗುಣವಂತೆ ಗ್ರಾಮ, ಕೂಸುಗೊಳ್ಳಿಯ ಸ.ನಂ. 74/5 ರಲ್ಲಿ ಚಾಸಾ-1 ಸುಜನ್ ರವರ ಭತ್ತದ ಗದ್ದೆಯಲ್ಲಿ ಚಾಸಾ-2 ಶ್ರೀನಿವಾಸ ರವರು ಚಾಸಾ-1 ರವರೊಂದಿಗೆ ಮಾತನಾಡುತ್ತಿದ್ದಾಗ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರಿಗೆ ಬೋಳಿಮಗನೆ, ಸೂಳೆಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಅವಮಾನ ಮಾಡಿ ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯ ರಹಿತವಾಗಿ ಸಾಬೀತು ಪಡಿಸುತ್ತಾರೆಯೇ?

2) ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರೊಂದಿಗೆ ಜಗಳ ತೆಗೆದು 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ-1 ರವರ ಬಲಕೈಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34ರ ಪ್ರಕಾರ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂಬುದನ್ನು ಅಭಿಯೋಜನೆಯವರು ಸಂಶಯ ರಹಿತವಾಗಿ ಸಾಬೀತು ಪಡಿಸುತ್ತಾರೆಯೇ?

3) ಮಾಡುವ ಆದೇಶ?

7. ನ್ಯಾಯಾಲಯದ ಮುಂದಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

| | |
|---|---|
| ಅಂಶ 1ಃ | ನಕಾರಾತ್ಮಕವಾಗಿ |
| ಅಂಶ 2ಃ | ನಕಾರಾತ್ಮಕವಾಗಿ |
| ಅಂಶ 3 ಃ | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದ |

## ***ಕಾ ರ ಣ ಗ ಳು***

8. ***ಅಂಶ 1 ಮತ್ತು 2***

ಈ ಎಲ್ಲಾ ಅಂಶಗಳು ಪರಸ್ಪರ ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚಿಸಲು ತೆಗೆದುಕೊಳ್ಳಲಾಗಿರುತ್ತದೆ. ಅಭಿಯೋಜನೆಯವರು ತಮ್ಮ ಪ್ರಕರಣಕ್ಕೆ ಪೂರಕವಾಗಿ ಪ್ರಾಸಾ 1 ಮತ್ತು 2 ರವರನ್ನು ವಿಚಾರಣೆ ಮಾಡಿಕೊಂಡು ನಿಪಿ 1 ರಿಂದ 10 ದಾಖಲೆಗಳನ್ನು ಹಾಗೂ ಮುದ್ದೆ ಮಾಲು-1 ನ್ನು ಗುರ್ತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪ್ರಕಾರ ಪ್ರಾಸಾ-1 ಶ್ರೀ ಗಂಗಶೆಟ್ಟಿ ರವರು ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ಕೈಗೊಂಡ ತನಿಖಾಧಿಕಾರಿಗಳು ಆಗಿರುತ್ತಾರೆ.

9. ಅಭಿಯೋಜನೆಯವರು ಪ್ರಕರಣವನ್ನು ದಾಖಲಿಸಿಕೊಂಡು, ತನಿಖೆ ಕೈಗೊಂಡ ತನಿಖಾಧಿಕಾರಿಗಳಾದ ಚಾಸಾ.7 ರವರನ್ನು ಪ್ರಾಸಾ.1 ಎಂದು ವಿಚಾರಣೆಗೆ ಒಳಪಡಿಸಿರುತ್ತಾರೆ. ಪ್ರಾಸಾ.1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 11-03-2022 ರಂದು ನಾನು ಠಾಣಾ ಎಸ ಹೆಚ್ ಒ ಕರ್ತವ್ಯದಲ್ಲಿರುವಾಗ ಸಂಜೆ 6-15 ಗಂಟೆ ಸಮಯದಲ್ಲಿ ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ. ಸಂಖ್ಯೆ 21/2022 ರಲ್ಲಿ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತನ್ನ ಮೇಲಾಧಿಕಾರಿಗಳಿಗೂ ಹಾಗೂ ನ್ಯಾಯಾಲಯಕ್ಕೂ ನಿವೇದಿಸಿಕೊಂಡು, ಅದೇ ದಿನ ಚಾಸಾ 1 ರವರನ್ನು ಪಿಸಿ 78 ರವರ ಮೂಲಕ ಕೊಪ್ಪದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳುಹಿಸಿ, ಅದೇ ದಿನ ಚಾಸಾ.1 ರವರಿಗೆ ನೋಟಿಸನ್ನು ನೀಡಿ ತನಿಖೆಗೆ ಹಾಜರಾಗಲು ತಿಳಿಸಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿನಾಂಕ 12/03/2022 ರಂದು ಚಾಸಾ.6 ರವರ ಜೊತೆಯಲ್ಲಿ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಅದೇ ಗ್ರಾಮದ ಚಾಸಾ 3 ಮತ್ತು 4 ರವರಿಗೆ ಪ್ರಕರಣದ ಮಾಹಿತಿಯನ್ನು

ತಿಳಿಸಿ ಪಂಚರಾಗಲು ಬರಮಾಡಿಕೊಂಡು ಅವರು ಒಪ್ಪಿಕೊಂಡ ಮೇರೆಗೆ ಅವರಿಗೆ ನೋಟಿಸನ್ನು ಜಾರಿ ಮಾಡಿ, ಆ ಸಮಯದಲ್ಲಿ ಚಾಸಾ 1 ರವರು ಕೃತ್ಯ ನಡೆದ ಸ್ಥಳವನ್ನು ಚಾಸಾ 3 ಹಾಗೂ 4 ರವರ ಸಮಕ್ಷಮದಲ್ಲಿ ತೋರಿಸಿದ ಮೇರೆಗೆ ಕೃತ್ಯ ನಡೆದ ಸ್ಥಳವನ್ನು ಪರೀಶೀಲಿಸಿ ಮಹಜರ್ ಕ್ರಮವನ್ನು ಸಂಜೆ 5-30 ರಿಂದ 6-30 ವರೆಗೂ ಜರುಗಿಸಿ, ಆ ಸಮಯದಲ್ಲಿ ಚಾಸಾ 1 ರವರು ತೋರಿಸಿದ ಒಂದು ಕಾಡು ಜಾತಿಯ ಹಿಡಿ ಗಾತ್ರದ ಎರಡು ಅಡಿ ಉದ್ದದ ಮರದ ದೊಣ್ಣೆಯನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದುಕೊಂಡು ಅದಕ್ಕೆ ಚೀಟಿಯನ್ನು ಅಂಟಿಸಿ, ಆ ಸಮಯದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿಕೊಂಡು ಭಾವಚಿತ್ರಗಳನ್ನು ತೆಗೆಸಿಕೊಂಡು, ಠಾಣೆಗೆ ಬಂದು ವಶಕ್ಕೆ ಪಡೆದಿರುವ ಮುದ್ದೆ ಮಾಲನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 16/2022 ರಲ್ಲಿ ನಮೂದಿಸಿ ನ್ಯಾಯಾಲಯದಿಂದ ಅನಮತಿ ಪಡೆದಿರುತ್ತೇನೆ ಎಂದು ನುಡಿದರುತ್ತಾರೆ.

10. ಪ್ರಾಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆಯಲ್ಲಿ ಅದೇ ದಿನ ಚಾಸಾ 1 ರವರ ಮುಂದುವರೆದ ಹೇಳಿಕೆ ಪಡೆದುಕೊಂಡು, ಚಾಸಾ 2 ರವರ ಹೇಳಿಕೆ ಪಡೆದುಕೊಂಡು, ಅದೇ ದಿನ ಚಾಸಾ 6 ರವರಿಂದ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಲಂ 65 ಬಿ ಎವಿಡೆನ್ಸ್ ಆಕ್ಟ್ ಅಡಿಯಲ್ಲಿ ದೃಢೀಕರಣ ಪತ್ರವನ್ನು ಪಡೆದು ಈ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿನಾಂಕ 17/03/2022 ರಂದು 1 ರಿಂದ 4 ನೇ ಆರೋಪಿಗಳು ಖುದ್ದಾಗಿ ಪೋಲಿಸ್ ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ಕಲಂ 41 ಎ ಸಿ ಆರ್ ಪಿಸಿ ಯಡಿಯಲ್ಲಿ ನೋಟಿಸನ್ನು ಜಾರಿ ಮಾಡಿ ಅವರಿಂದ ದಾಖಲಾತಿಗಳನ್ನು ಪಡೆದಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿ:14/04/2022 ರಂದು ಚಾಸಾ.1 ರವರಿಗೆ ಸ್ಥಳದ ದಾಖಲಾತಿಗಳನ್ನು ಹಾಜರುಪಡಿಸಲು ನೋಟಿಸನ್ನು ಜಾರಿ ಮಾಡಿ, ಅದೇ ದಿನ ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಕೋರಿ ಚಾಸಾ 5 ರವರಿಗೆ ಮನವಿ

ನೀಡಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿ:21/05/2022 ರಂದು ಚಾಸಾ.5 ರವರಿಂದ ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಈ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿನಾಂಕ 31/05/2022 ರಂದು ಚಾಸಾ 1 ರವರು ಠಾಣೆಗೆ ಹಾಜರಾಗಿ ಶ್ರೀಮತಿ ರತ್ನಮ್ಮನವರು ಅವರ ಪರವಾಗಿ ನೀಡಿರುವ ಜಿಪಿಎ ಯನ್ನು ಹಾಜರುಪಡಿಸಿದ್ದು ಅದನ್ನು ಈ ಪ್ರಕರಣದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದರುತ್ತಾರೆ. ಮುಂದುವರೆದು ದಿನಾಂಕ 26/07/2022 ರಂದು ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿಗಳ ವಿರುದ್ಧ ಆರೋಪ ಸಾಬೀತಾದ ಕಾರಣ ಅವರ ವಿರದ್ಧ ನ್ಯಾಯಾಲಯದಲ್ಲಿ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದು ನುಡಿದರುತ್ತಾರೆ.

11. ಪ್ರಾಸಾ.1 ರವರು ದೂರನ್ನು ನಿಪಿ.1 ಹಾಗೂ ತನ್ನ ಸಹಿಯನ್ನು ನಿಪಿ.1(ಎ) ಎಂದು, ಪ್ರ.ವ.ವರದಿಯನ್ನು ನಿಪಿ.2 ಹಾಗೂ ತನ್ನ ಸಹಿಯನ್ನು ನಿಪಿ.2(ಎ) ಎಂದು, ಚಾಸಾ 3 ಹಾಗೂ 4 ರವರಿಗೆ ನೀಡಿದ ನೋಟಿಸನ್ನು ನಿಪಿ.3 ಹಾಗೂ ತನ್ನ ಸಹಿಯನ್ನು ನಿಪಿ.3(ಎ) ಎಂದು, ಸ್ಥಳ ಮಹಜರನ್ನು ನಿಪಿ.4 ಹಾಗೂ ತನ್ನ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ತೆಗೆದುಕೊಂಡಿರುವ 2 ಭಾವಚಿತ್ರಗಳಲ್ಲಿ ಪ್ರಾಸಾ.1 ರವರು ತನ್ನನ್ನು ಹಾಗೂ ವಶಕ್ಕೆ ಪಡೆದಿರುವ ವಸ್ತುವನ್ನು ನೋಡಿ ಗುರುತಿಸಿ, ಸದರಿ ಭಾವಚಿತ್ರಗಳನ್ನು ನಿಪಿ.5 ಹಾಗೂ 6 ಹಾಗೂ ಒಂದು ಸಿಡಿಯನ್ನು ನಿಪಿ.7 ಎಂದೂ ಗುರುತಿಸಿಕೊಂಡಿರುತ್ತಾರೆ. ಚಾಸಾ 6 ರವರು ನೀಡಿದ ದೃಢೀಕರಣ ಪತ್ರವನ್ನು ನಿಪಿ.8 ಹಾಗೂ ತನ್ನ ಸಹಿಯನ್ನು ನಿಪಿ.8(ಎ) ಎಂದು, ಚಾಸಾ.5 ರವರಿಗೆ ನೀಡಿದ ಮನವಿಯನ್ನು ನಿಪಿ.9 ಹಾಗೂ ತನ್ನ ಸಹಿಯನ್ನು ನಿಪಿ.9(ಎ) ಎಂದು, ಚಾಸಾ 5 ರವರು ನೀಡಿದ ಚಾಸಾ 1 ರವರ ಗಾಯದ ಪ್ರಮಾಣಪತ್ರವನ್ನು ನಿಪಿ.10 ಹಾಗೂ ತನ್ನ ಸಹಿಯನ್ನು ನಿಪಿ.110(ಎ) ಎಂದು, ನ್ಯಾಯಾಲಯದ ಮುಂದಿರುವ ಒಂದು ಕಾಡು ಜಾತಿಯ ಹಿಡಿ ಗಾತ್ರದ ಸುಮಾರು 2 ಅಡಿ ಉದ್ದದ ಮರದ ದೊಣ್ಣೆಯನ್ನು

ಎಂಒ.1 ಎಂದು ಗುರುತಿಸಿಕೊಂಡಿರುತ್ತಾರೆ. ಪ್ರಾಸಾ.1 ರವರನ್ನು ಆರೋಪಿಗಳ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ ಪ್ರಾಸಾ-1 ರವರು ತಮ್ಮ ಪಾಟೀ ಸವಾಲಿನಲ್ಲಿ ವಕೀಲರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿರುತ್ತಾರೆ ಹಾಗೂ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

12. ಈ ಪ್ರಕರಣದಲ್ಲಿ ಪಿರ್ಯಾದಿದಾರರಾದ ಚಾಸಾ.1 ರವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆಗಾಗಿ ಸಮನ್ಸ್ ಜಾರಿಗೊಳಿಸಿದ್ದು, ಸದರಿಯವರು ದಿನಾಂಕ 09.12.2024 ರಂದು ನ್ಯಾಯಾಲಯಕ್ಕೆ ಹಾಜರಾಗಿದ್ದು, ತದನಂತರದಲ್ಲಿ ಚಾಸಾ.1 ರವರು ಇಲ್ಲಿಯವರೆಗೂ ಸಾಕ್ಷಿ ವಿಚಾರಣೆಗಾಗಿ ನ್ಯಾಯಾಲಯದ ಮುಂದೆ ಹಾಜರಾಗಿರುವುದಿಲ್ಲ.

13. ಪ್ರಾಸಾ-1 ರವರು ರವರು ಇಲಾಖಾಧಿಕಾರಿಗಳು ಆಗಿರುತ್ತಾರೆ. ಸಹಜವಾಗಿ ಆರೋಪಿತರ ವಿರುದ್ದ ಸಾಕ್ಷ್ಯ ನುಡಿಯುವಂತಹ ಹಿತಾಸಕ್ತಿ ಇರುವುದರಿಂದ ಅವರ ಸಾಕ್ಷ್ಯವನ್ನು ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯದ ಸಮರ್ಥನೆ ಇಲ್ಲದೆ ನಂಬಲಾಗುವುದಿಲ್ಲ. ಸದರಿಯವರು ತಾವು ಮಾಡಿದಂತಹ ತನಿಖೆಗೆ ಪೂರಕವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ. ಅವರ ಸಾಕ್ಷ್ಯದ ಆಧಾರದ ಮೇಲೆ ಮಾತ್ರ 1 ರಿಂದ 3 ನೇ ಆರೋಪಿಗಳು ಒಟ್ಟಾಗಿ ಚಾಸಾ.1 ರವರಿಗೆ ಅವಾಚ್ಯವಾಗಿ ಬೈದು, 1 ನೇ ಆರೋಪಿತನು ದೊಣ್ಣೆಯಿಂದ, ಚಾಸಾ-1 ರವರ ಬಲಕೈಯಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವುಂಟುಮಾಡಿರುತ್ತಾರೆ ಎಂಬುವುದನ್ನು ನಂಬಲು ಸಾಧ್ಯವಿಲ್ಲ.

14. ಈ ಮೇಲ್ಕಂಡ ಎಲ್ಲಾ ಕಾರಣಗಳಿಂದ 1 ರಿಂದ 3 ನೇ ಆರೋಪಿಗಳು ಮೃತ 4 ನೇ ಆರೋಪಿಯೊಂದಿಗೆ ಸೇರಿಕೊಂಡು ಚಾಸಾ.1 ರವರಿಗೆ ಅವಾಚ್ಯವಾಗಿ ಬೈದು, 1 ನೇ ಆರೋಪಿತನು ದೊಣ್ಣೆಯಿಂದ ಚಾಸಾ-1 ರವರ ಬಲಕೈಯಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನು ಉಂಟುಮಾಡಿರುತ್ತಾರೆ ಎಂಬುವುದನ್ನು ಅಭಿಯೋಜನೆಯವರು ರುಜುವಾತು ಪಡಿಸುವಲ್ಲಿ ವಿಫಲರಾಗಿರುತ್ತಾರೆ. ಆದ್ದರಿಂದ 1 ರಿಂದ 3 ನೇ ಆರೋಪಿತರು ಅನುಮಾನದ ಲಾಭವನ್ನು ಪಡೆಯಲು ಅರ್ಹನಾಗಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ಧದ ಮೇಲಿನ ಆಪಾದನೆಯನ್ನು ಸಾಬೀತುಪಡಿಸಲು ಅಭಿಯೋಜನೆಯು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ ಎಂದು ತೀರ್ಮಾನಿಸಿ ಅಂಶ.1 ಮತ್ತು 2 ಗಳನ್ನು ನಕರಾತ್ಮಕವಾಗಿ ಉತ್ತರಿಸಲಾಗಿದೆ.

15. **<u>ಅಂಶ 3ಃ:-</u>**

ಅಂಶ 1 ಮತ್ತು 2 ರಲ್ಲಿ ಚರ್ಚಿಸಿ ಕೊಟ್ಟ ಕಾರಣಗಳಿಗೆ ಹಾಗೂ ಬಂದ ತೀರ್ಮಾನದಂತೆ, ಈ ಕೆಳಕಂಡಂತೆ ಆದೇಶವನ್ನು ಮಾಡಿರುತ್ತೇನೆ.

## <u>ಆ ದೇ ಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1)ರ ಅಡಿಯಲ್ಲಿ 1 ರಿಂದ 3 ನೇ ಆರೋಪಿತರನ್ನು ಭಾ.ದಂ.ಸಂ. ಕಲಂ 504, 324 ಸಹವಾಚಕ ಕಲಂ 34 ರ ಅಪರಾಧಕ್ಕೆ ನಿರ್ದೋಷಿಯಾಗಿರುತ್ತಾರೆಂದು ಖುಲಾಸೆ ಗೊಳಿಸಲಾಗಿದೆ.

ಈ ಪ್ರಕರಣದಲ್ಲಿ 1 ರಿಂದ 3 ನೇ ಆರೋಪಿತರ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯೆ ಸಂಹಿತೆ 437(ಎ)ರ ಅಡಿಯಲ್ಲಿ

Visit **ecourts.gov.in** for updates or download mobile app "**eCourts Services**" from Android or iOS

ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ದಿನದಿಂದ 6 ತಿಂಗಳ ವರೆಗೆ ಚಾಲ್ತಿಯಲ್ಲಿರುತ್ತವೆ.

ಮುದ್ದೆ ಮಾಲು-1ನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖಿಸಿ, ಅವರು ನೇರವಾಗಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ, ಅದನ್ನು ಓದಿ, ತಪ್ಪುಗಳನ್ನು ತಿದ್ದಿ, ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 25 ನೇ ದಿವಸ ಜನವರಿ ಮಾಹೆ 2025 ರಂದು ನಾನು ಘೋಷಿಸಿದ್ದೇನೆ)

ಸಹಿ/- 25.01.2025.
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ

## ಅ ನು ಬಂ ಧ

**ಅಭಿಯೋಜನೆಯವರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ**

ಪ್ರಾಸಾ 1 ಃ ಶ್ರೀ ಗಂಗಶೆಟ್ಟಿ

**ಆರೋಪಿತರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿಃ**

- ಇಲ್ಲ -

**ಅಭಿಯೋಜನೆಯವರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

| | | |
|---|---|---|
| ನಿಪಿ 1 | ಃ | ದೂರು |
| ನಿಪಿ 1(ಎ) | ಃ | ಸಹಿ |
| ನಿಪಿ 2 | ಃ | ಪ್ರ.ವ.ವ. |
| ನಿಪಿ 2(ಎ) | ಃ | ಸಹಿ |
| ನಿಪಿ 3 | ಃ | ಪಂಚರಿಗೆ ನೀಡಿದ ನೋಟೀಸು |
| ನಿಪಿ 3(ಎ) | ಃ | ಸಹಿ |
| ನಿಪಿ 4 | ಃ | ಸ್ಥಳ ಮಹಜರ್ |
| ನಿಪಿ 4(ಎ) | ಃ | ಸಹಿ |

| | | |
|---|---|---|
| ನಿಪಿ 5-6 | ಃ | ಫೋಟೋ |
| ನಿಪಿ 7 | ಃ | ಸಿ.ಡಿ. |
| ನಿಪಿ 8 | ಃ | ದೃಡೀಕರಣ ಪತ್ರ |
| ನಿಪಿ 8(ಎ) | ಃ | ಸಹಿ |
| ನಿಪಿ 9 | ಃ | ವೈದ್ಯರಿಗೆ ನೀಡಿದ ಮನವಿ |
| ನಿಪಿ 9(ಎ) | ಃ | ಸಹಿ |
| ನಿಪಿ 10 | ಃ | ಗಾಯದ ಪ್ರಮಾಣ ಪತ್ರ |
| ನಿಪಿ 10(ಎ) | ಃ | ಸಹಿ |

**ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ಪಟ್ಟಿಃ**

- ಇಲ್ಲ -

**ಈ ಪ್ರಕರಣದಲ್ಲಿ ಗುರುತಿಸಲಾದ ಮುದ್ದೆಮಾಲುಗಳ ಪಟ್ಟಿಃ**

ಮುದ್ದೆ ಮಾಲು-1 ಃ ಒಂದು ಕಾಡುಜಾತಿಯ ಮರದ ದೊಣ್ಣೆ

ಸಹಿ/- 25.01.2025.
(ಐಶ್ವರ್ಯ ಚಿದಾನಂದ್ ಪಟ್ಟಣಶೆಟ್ಟಿ)
ಸಿವಿಲ್‌ನ್ಯಾಯಾಧೀಶರು ಮತ್ತು
ಪ್ರದನ್ಯಾದಂಃ ಕೊಪ್ಪ.

AISHWARYA C PATTANSHETTI

Digitally signed by AISHWARYA C PATTANSHETTI
Date: 2025.01.28 17:01:05 +0530

Visit **ecourts.gov.in** for updates or download mobile app “**eCourts Services**” from Android or iOS